ಕರ್ನಾಟಕ ಸರ್ಕಾರ
Government of Karnataka
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
DEPARTMENT OF STATE EDUCATIONAL RESEARCH AND TRAINING
No 4, 100 FT RING ROAD, BANASHANKARI 3 RD STAGE BENGALURU - 560 085
Email: dpi.dsert-ka@nic.in Website: http://dsert.kar.nic.in
Phone - 080 26980100
Fax - 080 26422377

ಸಂಖ್ಯೆ: E-89394/DSERT/ENGC/1/2025-TECD ದಿನಾಂಕ: 25-05-2026

## ಜ್ಞಾಪನ

ವಿಷಯ: 2026-27ನೇ ಸಾಲಿನ Monograde ದ್ವಿಭಾಷಾ ತರಗತಿಗಳ ಬೋಧನೆಯನ್ನು ಅನುಕೂಲಿಸಲು Transition ಯೋಜನೆಯ ಸಂಬಂಧಿತ ತರಬೇತಿಗಳನ್ನು ಆಯೋಜಿಸುವ ಕುರಿತು.

ಉಲ್ಲೇಖ: 1. ಸರ್ಕಾರದ ಆದೇಶದ ಸಂಖ್ಯೆ: ಇಪಿ: 105 ಎಂ.ಪಿ.ಇ 2024 ಬೆಂಗಳೂರು ದಿನಾಂಕ: 29.01.2026.
2.ಈ ಕಛೇರಿ ಪತ್ರ ದಿ-21-05-2026.

***********

2026-27ನೇ ಸಾಲಿಗೆ ರಾಜ್ಯದ ಎಲ್ಲಾ ಕೆ.ಪಿ.ಎಸ್ ಶಾಲೆಗಳು, ಪಿಎಂಶ್ರೀ ಶಾಲೆಗಳು ಮತ್ತು ಎಲ್ಲಾ ದ್ವಿಭಾಷಾ ತರಗತಿಗಳನ್ನು ಪ್ರಾರಂಭಿಸಿರುವ ಸರ್ಕಾರಿ ಶಾಲೆಗಳು, ಎಲ್ಲಾ ಪೂರ್ವ ಪ್ರಾಥಮಿಕ ತರಗತಿಗಳನ್ನು ಪ್ರಾರಂಭಿಸಿರುವ ಸರ್ಕಾರಿ ಶಾಲೆಗಳು, ಗಣಿಬಾಧಿತ ತಾಲ್ಲೂಕುಗಳ ಎಲ್ಲಾ ಸರ್ಕಾರಿ ಶಾಲೆಗಳು ಮತ್ತು 15 ಜಿಲ್ಲೆಗಳ ಎಲ್ಲಾ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ದ್ವಿಭಾಷಾ ತರಗತಿಗಳನ್ನು ಪ್ರಾರಂಭಿಸಲು ಉಲ್ಲೇಖಿತ ಪತ್ರದಂತೆ ಆದೇಶಿಸಲಾಗಿದೆ

ಈ ಎಲ್ಲಾ ದ್ವಿಭಾಷಾ ಶಾಲೆಗಳ 1 ರಿಂದ 5 ನೇ ತರಗತಿಯ ವಿದ್ಯಾರ್ಥಿಗಳನ್ನು ದ್ವಿಭಾಷಾ ವಿಧಾನದ ಕಲಿಕೆಗೆ ಸಜ್ಜುಗೊಳಿಸಲು 30 ದಿನಗಳ Tranisition ಯೋಜನೆಯನ್ನು ಸಿದ್ದಪಡಿಸಲಾಗಿರುತ್ತದೆ ಸದರಿ ಯೋಜನೆಯ ಅನುಷ್ಠಾನಕ್ಕೆ ಮಾಡ್ಯೂಲ್‌ನ್ನು ಸಿದ್ಧಪಡಿಸಲಾಗಿದೆ. ಮಾಡ್ಯೂಲ್‌ಗೆ ಸಂಬಂಧಿಸಿದಂತೆ ರಾಜ್ಯ ಹಂತದ MRP ತರಬೇತಿ ,ತಾಲ್ಲೂಕು ಹಂತದ MRPತರಬೇತಿ ಹಾಗೂ ಶಿಕ್ಷಕರ ತರಬೇತಿಗಳನ್ನು ಆಯೋಜಿಸಬೇಕಿದೆ.

ಉಲ್ಲೇ(2) ರನ್ವಯ ರಾಜ್ಯ ಹಂತದ MRP ತರಬೇತಿಯನ್ನು ದಿನಾಂಕ 26-05-2026 ರಂದು ಬೆಳಿಗ್ಗೆ 10.00 ರಿಂದ ಸಂಜೆ 5.00 ಗಂಟೆಯವರೆಗೆ V.C ಮುಖಾಂತರ ಆಯೋಜಿಸಲಾಗಿದೆ. **(V.C.Code:300300).** ಸದರಿ ತರಬೇತಿಗೆ ಪ್ರತಿ ತಾಲ್ಲೂಕಿನಿಂದ 05 MRP ಗಳನ್ನು ಆಯ್ಕೆ ಮಾಡಿ ಜಿಲ್ಲಾ ಹಂತದ ಡಯಟ್ ಗಳ ಸ್ವೀಕೃತಿ ಕೇಂದ್ರದಲ್ಲಿ ತರಬೇತಿಯನ್ನು ಪಡೆಯುವಂತೆ ಕ್ರಮವಹಿಸುವುದು.

ರಾಜ್ಯ ಹಂತದ ತರಬೇತಿ ಪಡೆದ MRP ಗಳಿಂದ ದಿ-27-05-2026 ರಂದು ಪ್ರತಿ ತಾಲ್ಲೂಕಿನಿಂದ 15 ಸಂಪನ್ಮೂಲ ವ್ಯಕ್ತಿಗಳನ್ನು ಆಯ್ಕೆ ಮಾಡಿಕೊಂಡು ಒಂದು ದಿನದ ಮುಖಾಮುಖಿ ತರಬೇತಿಯನ್ನು ನೀಡುವುದು.

ರಾಜ್ಯ ಹಂತದ ಹಾಗೂ ಜಿಲ್ಲಾ ಹಂತದ ಸದರಿ ಸಂಪನ್ಮೂಲ ವ್ಯಕ್ತಿಗಳ ಮೂಲಕ ದಿ-29-05-2025 ಮತ್ತು 30-05-2025 ರಂದು ತಾಲ್ಲೂಕಿನ ಎಲ್ಲಾ ದ್ವಿಭಾಷಾ ಶಾಲಾ ಶಿಕ್ಷಕರಿಗೆ ಒಂದು ದಿನದ ಮುಖಾಮುಖಿ ತರಬೇತಿಯನ್ನು ನೀಡುವುದು.

ರಾಜ್ಯದ ಎಲ್ಲಾ ಉಪನಿರ್ದೇಶಕರು(ಅಭಿವೃದ್ಧಿ) ಹಾಗೂ ಉಪನಿರ್ದೇಶಕರು(ಆಡಳಿತ) ರವರು ಈ ಎಲ್ಲಾ ತರಬೇತಿಗಳನ್ನು ನಿಗದಿತ ದಿನಾಂಕಗಳಂದೇ, ಯಶಸ್ವಿಯಾಗಿ ಆಯೋಜಿಸಿ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲೇ ದ್ವಿಭಾಷಾ ಶಿಕ್ಷಕರನ್ನು ತರಗತಿ ಬೋಧನೆಗೆ ಸಜ್ಜುಗೊಳಿಸಲು ತಿಳಿಸಿದೆ.

ನಿರ್ದೇಶಕರು
ಡಿ.ಎಸ್.ಇ.ಆರ್.ಟಿ. ಬೆಂಗಳೂರು

**ರವರಿಗೆ,**

1. ಉಪನಿರ್ದೇಶಕರು (ಆಡಳಿತ) ಮತ್ತು ಉಪನಿರ್ದೇಶಕರು (ಅಭಿವೃದ್ಧಿ) ರವರಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ.
2. ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ಉಪನಿರ್ದೇಶಕರು (ಆಡಳಿತ) ರವರ ಮೂಲಕ ಅಗತ್ಯ ಕ್ರಮಕ್ಕಾಗಿ.
3. ಕಛೇರಿ ಪ್ರತಿ.

**ಪ್ರತಿಗಳನ್ನು :**

1. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು,ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆ,ಬೆಂಗಳೂರು ರವರಿಗೆ ಗೌರವ ಪೂರ್ವಕವಾಗಿ ಸಲ್ಲಿಸಿದೆ.
2. ಮಾನ್ಯ ಆಯುಕ್ತರು,ಶಾಲಾ ಶಿಕ್ಷಣ ಇಲಾಖೆ,ಬೆಂಗಳೂರು ರವರಿಗೆ ಗೌರವ ಪೂರ್ವಕವಾಗಿ ಸಲ್ಲಿಸಿದೆ.
3. ಮಾನ್ಯ ರಾಜ್ಯ ಯೋಜನಾನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ,,ಬೆಂಗಳೂರು ರವರಿಗೆ ಗೌರವ ಪೂರ್ವಕವಾಗಿ ಸಲ್ಲಿಸಿದೆ.
4. ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಕಲ್ಬುರ್ಗಿ ವಿಭಾಗ ರವರಿಗೆ ಗೌರವ ಪೂರ್ವಕವಾಗಿ ಸಲ್ಲಿಸಿದೆ.